**O.S.No.493/2025**
**P.W-1**

**ಸಾಕ್ಷಿ ಯನ್ನು ದಿಃ 29.06.2026ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಜಿ ಟಿ ಕೆ ವಕೀಲರಿಂದ:**

ಸಾಕ್ಷಿ ಇಂದು ಕಟ್ಟೆಯಲ್ಲಿ ನಿಂತು ತಮ್ಮ ಮುಖ್ಯ ವಿಚಾರಣೆಯ ಭಾಗವಾಗಿ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ ಹಾಗೂ ಅದರಲ್ಲಿ ಬರೆದಿರುವ ಅಂಶಗಳೆಲ್ಲವೂ ಸತ್ಯವಾಗಿರುತ್ತವೆ ಹಾಗೂ ಅದರಲ್ಲಿರುವ ಸಹಿ ತನ್ನದೇ ಎಂದು ಹೇಳಿರುತ್ತಾರೆ.

**ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆಃ**

1. ದಿನಾಂಕಃ10.06.2024ರ Indian Overseas ಬ್ಯಾಂಕ್ ಕುಣಿಗಲ್ ಶಾಖೆಯ ಚೆಕ್ಕನ್ನು ಹಾಜರುಪಡಿಸಿದ್ದು **ನಿ.ಪಿ.1** ಎಂದು ಗುರುತಿಸಲಾಯಿತು.

2. SBI ಬ್ಯಾಂಕ್, ಕುಣಿಗಲ್ ಶಾಖೆಯ ಹಿಂಬರಹವನ್ನು **ನಿ.ಪಿ.2** ಎಂದು ಗುರುತಿಸಲಾಯಿತು.

3. ಒಂದು ಮೆಮೋ ಅನ್ನು ಹಾಜರುಪಡಿಸಿದ್ದು, ಅದನ್ನು **ನಿ.ಪಿ.3 ಎಂದು ಗುರುತಿಸಲಾಯಿತು.**

**4.** ದಿನಾಂಕಃ 12.08.2024 ರಂದು ಪ್ರತಿವಾದಿಗಳಿಗೆ ಕಳುಹಿಸಿದ ನೋಟೀಸಿನ ಪ್ರತಿಯನ್ನು **ನಿ.ಪಿ.4 ಎಂದು ಗುರುತಿಸಲಾಯಿತು.**

**5.** ಒಂದು ಅಂಚೆ ರಸೀದಿಯನ್ನು ಹಾಜರುಪಡಿಸಿದ್ದು, ಅದನ್ನು **ನಿ.ಪಿ.5 ಎಂದು ಗುರುತಿಸಲಾಯಿತು.**

6. ಒಂದು ಅಂಚೆ ಸ್ವೀಕೃತಿಯನ್ನು ಹಾಜರುಪಡಿಸಿದ್ದು, **ಅದನ್ನು ನಿ.ಪಿ.6 ಎಂದು ಗುರುತಿಸಲಾಯಿತು.**

7. ಜಾರಿಯಾಗದೇ ಬಂದ ಒಂದು ಅಂಚೆ ಲಕೋಟೆಯನ್ನು ಹಾಜರುಪಡಿಸಿದ್ದು, ಅದನ್ನು **ನಿಪಿ.7** ಎಂದು ಗುರುತಿಸಲಾಯಿತು. ಸದರಿ ಲಕೋಟೆಯಲ್ಲಿನ ನೋಟಿಸ್ ನ್ನು **ನಿಪಿ.7(ಎ)** ಎಂದು ಗುರುತಿಸಲಾಯಿತು.

8. ದಿನಾಂಕಃ 16.11.2024 ರಂದು ಪ್ರತಿವಾದಿಗಳಿಗೆ ಕಳುಹಿಸಿದ ನೋಟೀಸಿನ ಪ್ರತಿಯನ್ನು **ನಿ.ಪಿ.8** ಎಂದು ಗುರುತಿಸಲಾಯಿತು.

9. ಮೂರು ಅಂಚೆ ರಸೀದಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿ.ಪಿ.9 ರಿಂದ ನಿಪಿ.11 ಎಂದು ಗುರುತಿಸಲಾಯಿತು.

10. ಜಾರಿಯಾಗದೇ ಬಂದ ಎರಡು ಅಂಚೆ ಲಕೋಟೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಪಿ.12 ಮತ್ತು ನಿಪಿ.13 ಎಂದು ಗುರುತಿಸಲಾಯಿತು. ಸದರಿ ಲಕೋಟೆಗಳಲ್ಲಿನ ನೋಟಿಸ್ ಗಳನ್ನು ನಿಪಿ.12(ಎ) ಮತ್ತು ನಿಪಿ.13(ಎ) ಎಂದು ಗುರುತಿಸಲಾಯಿತು.

**ಪ್ರತಿವಾದಿ ಏಕತರ್ಪೀಯವಾದ ಕಾರಣ, ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**

*( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು .)*

ಓ. ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್.